## ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ

***ಸಿ.ಸಿ.ನಂ.457/2025***

**ಫಿರ್ಯಾಧಿದಾರ:** ಕರ್ನಾಟಕ ಸರ್ಕಾರದ ಪರವಾಗಿ ಅಬಕಾರಿ ಪೋಲಿಸ, ಚಿಂಚೋಳಿ

// ವಿರುದ್ಧ //

**ಆರೋಪಿ:** ರಾಘವೇಂದ್ರ

ದೋ ಷಾ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕಂಡ ಆರೋಪಿ

| | |
|---|---|
| 1. | ರಾಘವೇಂದ್ರ ತಂದೆ ಶಿವಯ್ಯ |

**ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಎನೆಂದರೆ,**

ದಿನಾಂಕಃ 13-04-2024 ರಂದು ಮಧ್ಯಾಹ್ನ 03.00 ಗಂಟೆ ಸುಮಾರಿಗೆ ಚಿಂಚೋಳಿ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ನಿಡಗುಂದಾ ಗ್ರಾಮದಿಂದ ಸೇಡಂ ತಾಲೂಕಿಗೆ ಹೋಗುವ ಮುಖ್ಯ ರಸ್ತೆಯ ಮೇಲೆ ಆರೋಪಿ ನೀನು ಒಂದು ದ್ವಿಚಕ್ರ ವಾಹನದ ಮೇಲೆ 90 ಎಮ್.ಎಲ್ ನ ಓರಿಜನಲ ಚಾಯ್ಸ ವಿಸ್ಕಿಯ 672 ಮದ್ಯದ ಟೆಟ್ರಾ ಪ್ಯಾಕೆಟಗಳು, 650 ಎಮ್.ಎಲ್ ನ ಕಿಂಗ ಫಿಶರ ಬೀಯರ 6 ಬಾಟಲಿಗಳು ಹಾಗೂ 330 ಎಮ್.ಎಲ್ ನ ನಾಕ್ ಔಟ ಹೈ ಪಂಚ ಬೀಯರನ 48 ಟಿನಗಳು ಯಾವುದೇ ಅಧಿಕೃತ ಪರವಾನಿಗೆ ಪಡೆಯದೆ ಅನಧಿಕೃತವಾಗಿ ಕಾನೂನು ಬಾಹಿರವಾಗಿ ಸಾಗಾಣಿಕೆ ಮಾಡುತಿದ್ದ ಕಾರಣ ಆರೋಪಿ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾಹರ್ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನೀನು ಮದ್ಯವನ್ನು ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪರವಾನಗಿ/ಅನುಮತಿಯನ್ನು ಪಡೆಯಡದೆ ನಿಗದಿತ ಪ್ರಮಾಣವನ್ನು ಮೀರಿದ ಮದ್ಯವನ್ನು ಪರವಾರನಿಗೆ ಇಲ್ಲದೆ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಟ ಮಾಡುವ ಕಾರಣ, ಆರೋಪಿ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.38-ಎ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 25.10.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.